# ಕಾಶಿಯಲ್ಲಿ ಸಾಧುಸಂಗ ಮತ್ತು ಸ್ವಾಮಿ ಅಚಲಾನಂದ

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾ**ರತದ ಆಧ್ಯಾತ್ಮಿಕ ಇತಿಹಾಸದಲ್ಲಿ ಕಾಶಿಯದು ವಿಶಿಷ್ಟ ಸ್ಥಾನ. ಕಾಶಿ ಜೀವಂತವಾಗಿರುವವರೆಗೆ ಹಿಂದೂಧರ್ಮವನ್ನು ಕದಲಿಸಲಾಗದು ಎಂಬ ಮಾತಿದೆ. 'ಕಾಶಿ' ಅಂದರೆ 'ಮುಕ್ತಿ'. 'ಕಾಶ್' ಧಾತುವಿಗೆ 'ದೀಪ್ತವಾದುದು' ಎಂದರ್ಥ. ಯಾವುದರಿಂದ ಸರ್ವವೂ ಪ್ರಕಾಶಿತವಾಗುವುದೋ ಅದೇ 'ಕಾಶಿ.' ಕಾಶಿಯೇ ಜ್ಞಾನಪುರಿಯೂ, ವಿಮುಕ್ತ ನಗರಿಯೂ ಆಗಿರುವುದು. ವಿಶ್ವನಾಥ-ಅನ್ನಪೂರ್ಣೆಯರು ಕಾಶಿಯ ಅಧಿಷ್ಠಾತೃ ದೇವದೇವಿಯರು. ಪ್ರತಿಯೊಬ್ಬ ಹಿಂದೂವಿನ ಮನದಲ್ಲೂ ಬಹುಶಃ ಕಾಶೀವಾಸ ಇಲ್ಲವೇ ಕಾಶೀದರ್ಶನದ ಅಭಿಲಾಷೆ ಜಾಗೃತವಾಗಿರುವುದು. ಕಾಶಿಯಲ್ಲಿ ಮರಣಹೊಂದಿದ ಜೀವಿಗೆ ಮುಕ್ತಿಯಾಗುತ್ತದೆ ಎಂಬುದು ಅನೇಕರ ನಂಬಿಕೆ. ಈ ವಿಶ್ವಾಸದಿಂದಲೇ ಸಾಧುಗಳೂ ಸೇರಿದಂತೆ ಅನೇಕರು ಕಾಶಿಯಲ್ಲಿ ವಾಸಿಸುತ್ತಾರೆ.

೧೯೭೦ರ ಫೆಬ್ರವರಿ ತಿಂಗಳಿನಲ್ಲಿ ಕೆಲವು ದಿನ ನಾನು ಕಾಶಿಯಲ್ಲಿದ್ದೆ. ಆಗ ಸ್ವಯಂಪ್ರಭಾನಂದಜಿ (ತಾರಾಪ್ರಸನ್ನ ಮಹಾರಾಜರು) ಕಾಶಿ ಅದ್ವೈತ ಆಶ್ರಮದಲ್ಲಿದ್ದರು. ನಾನು ಅವರನ್ನು ಕೇಳಿದೆ: ''ಮಹಾರಾಜ್, ವಾಸನಾಕ್ಷಯವಾಗದೆ ತತ್ತ್ವ ಜ್ಞಾನವುಂಟಾಗದು; ತತ್ತ್ವಜ್ಞಾನದ ಹೊರತು ಮುಕ್ತಿ ಪಡೆಯಲಾಗದು ಎಂದು ಶಾಸ್ತ್ರಗಳು ಸಾರುತ್ತವೆ. ಶಾಸ್ತ್ರಗಳು ಕಾಶಿಯಲ್ಲಿ ಮರಣ ಹೊಂದಿದರೆ ಮುಕ್ತಿಯನ್ನು ಪಡೆಯಬಹುದೆಂದೂ ಹೇಳುತ್ತವೆ. ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರು ಇದನ್ನು ಪುಷ್ಟೀಕರಿಸುತ್ತಾರೆ. ಹಾಗಾದರೆ 'ಶಾಸ್ತ್ರಜ್ಞಾನ' ನಿರರ್ಥಕವೆಂದಾಯಿತು. ವೇದಾಂತಾದಿ ಶಾಸ್ತ್ರಗಳನ್ನು ಗಂಗೆಯಲ್ಲಿ ವಿಸರ್ಜಿಸಿ ಕಾಶಿಯಲ್ಲಿರುವುದೇ ಸರಿ.'' ಈ ನನ್ನ ಮಾತುಗಳಿಂದ ಮಹಾರಾಜರು ಅತ್ಯಂತ ಕೋಪಗೊಂಡರು. ''ನಮ್ಮಂತಹ ವೃದ್ಧರು ಆ ವಿಶ್ವಾಸದಿಂದಲೇ ಕಾಶಿವಾಸ ಮಾಡುತ್ತಿದ್ದೇವೆ. ನೀನೊಬ್ಬ ಬರಿಯ ಹುಡುಗ, ನಮ್ಮ ಮನಸ್ಸಿನಲ್ಲಿ ಭ್ರಮೆಯನ್ನುಂಟುಮಾಡಲು ಹೊರಟಿದ್ದೀಯಾ?'' ನಾನೆಂದೆ ''ಹಾಗೇನೂ ಇಲ್ಲ, ಮಹಾರಾಜ್, ನೀವು ಪ್ರವೀಣರೂ, ಶಾಸ್ತ್ರಗಳನ್ನು ಬಲ್ಲವರೂ ಆಗಿರುವಿರಿ. ನಾನು ಸತ್ಯವನ್ನು ತಿಳಿಯಬೇಕೆಂಬ ಉದ್ದೇಶದಿಂದ ಮಾತ್ರ ನಿಮ್ಮನ್ನು ಕೇಳಿದೆ.'' ಅವರು ಆಗ ಶಾಂತವಾಗಿ ಉತ್ತರಿಸಿದರು: ''ನೀನೂ ಸರಿ, ನಾನೂ ಸರಿ. ಅಂದರೆ, ಜ್ಞಾನವಿಲ್ಲದೆ ಮುಕ್ತಿಯಿಲ್ಲ. ಆದರೂ ಕಾಶಿಯಲ್ಲಿ ಮೃತರಾದರೆ ಮುಕ್ತಿ ದೊರಕುವುದು.'' ನಾನೆಂದೆ, ''ಇಬ್ಬರ ವಾದವೂ ಸರಿಯಾಗಿರಲು ಹೇಗೆ ಸಾಧ್ಯ?'' ಅವರು ನಸುನಗುತ್ತ, ''ಬಾಬಾ (ತಂದೆ) ವಿಶ್ವನಾಥನು ಕೊನೆಯಲ್ಲಿ ಜ್ಞಾನವನ್ನು ಕೊಡುವನು.''

೧೯೫೦ರ ನಂತರ ರಾಮಕೃಷ್ಣ ಸಂಘದ ಅನೇಕ ಹಿರಿಯ ಸಾಧುಗಳು ಕಾಶಿಯ ಅದ್ವೈತ ಆಶ್ರಮ ಹಾಗೂ ಸೇವಾಶ್ರಮದ ಹತ್ತನೆಯ ನಂಬರಿನ ವಾರ್ಡ್‌ನಲ್ಲಿದ್ದರು. ಇವರು ಶ್ರೀಮಾತೆ, ರಾಜಾ ಮಹಾರಾಜ್, ಮಹಾಪುರುಷ ಮಹಾರಾಜ್ ಹಾಗೂ ಶರತ್ ಮಹಾರಾಜರ ಶಿಷ್ಯರುಗಳಾಗಿದ್ದರು. ೧೯೬೫ ರಿಂದಲೇ ನಾನು ಕಾಶಿಗೆ ಹೋಗಿ ಬರುತ್ತಿದ್ದುದರಿಂದ ಅನೇಕ ಹಿರಿಯ ಸಾಧುಗಳ ಪರಿಚಯ ನನಗಿತ್ತು. ಅವರ ಕೆಲವು ಸ್ಮೃತಿಗಳನ್ನು ನಾನು ನನ್ನ ಡೈರಿಯಲ್ಲಿ ಬರೆದಿಟ್ಟುಕೊಳ್ಳುತ್ತಿದ್ದೆ. ತಮ್ಮ ಪುಣ್ಯಸ್ಮೃತಿಗಳನ್ನು ಬರೆದಿಟ್ಟುಕೊಂಡ ಸಾಧುಗಳು ಅತಿ ವಿರಳವಾಗಿರುವುದು ನಮ್ಮ ದೌರ್ಭಾಗ್ಯವೆಂದೇ ಹೇಳಬೇಕು. ಸಂಜೆಯ ಹೊತ್ತು ಕೆಲವು ಮಂದಿ ಸಾಧುಗಳು ಅದ್ವೈತ ಆಶ್ರಮದ ವರಾಂಡದಲ್ಲಿ ಕುಳಿತು ಠಾಕೂರರ ಶಿಷ್ಯರುಗಳ ಸ್ಮೃತಿಚಾರಣ ಮಾಡುತ್ತಿದ್ದುದನ್ನು ನಾನು ಗಮನಿಸುತ್ತಿದ್ದೆ. ಅವರಾಡಿದ ಅನೇಕ ಮಾತುಗಳನ್ನು ಬರೆದಿಟ್ಟುಕೊಂಡಿದ್ದ ಸ್ವಾಮಿ ಧೀರಾನಂದರು ತಮ್ಮ ಡೈರಿಯನ್ನು ನನಗೆ ಕೊಟ್ಟಿದ್ದರು. ಗುರುದಾಸ ಮಿತ್ರ ಎಂಬುವರೊಬ್ಬರು ಸ್ವಾಮಿ ಶಾರದಾನಂದರ ಶಿಷ್ಯರೂ, ಕಾಲೇಜು ಅಧ್ಯಾಪಕರೂ ಆಗಿದ್ದರು. ಅವಿವಾಹಿತರಾಗಿದ್ದ ಅವರು ಬ್ರಹ್ಮಚಾರಿ ಜೀವನವನ್ನು ನಡೆಸುತ್ತಿದ್ದರು. ಕರ್ಮನಿವೃತ್ತರಾಗಿ ತಮ್ಮ ಕೊನೆಗಾಲವನ್ನು ಕಾಶಿಯಲ್ಲಿ ಕಳೆದವರು. ಅವರೂ ಸಹ ಹಿರಿಯ ಸಾಧುಗಳು ಹೇಳುತ್ತಿದ್ದ ಠಾಕೂರರ ಶಿಷ್ಯರುಗಳ ವಿಷಯವನ್ನು ತಮ್ಮ ಅನೇಕ ಡೈರಿಗಳಲ್ಲಿ ಬರೆದಿಟ್ಟುಕೊಂಡಿದ್ದರು. ಸ್ವಾಮಿ ರಘುನಾಥಾನಂದ (ರಾಮ್‌ಪ್ರಸಾದ್ ಮಹಾರಾಜ್) ೧೯೮೨ರಲ್ಲಿ ಗುರುದಾಸ ಗುಪ್ತರ ಡೈರಿಗಳನ್ನೆಲ್ಲ ನನಗೆ ಕೊಟ್ಟರು.

ನೂತನ ವಿಷಯಗಳೆಂದರೆ ನನಗೆ ಎಲ್ಲಿಲ್ಲದ ಪ್ರೀತಿ. ಹೊಸ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುವುದರಲ್ಲಿ ನನಗೆ ಅತ್ಯಂತ ಉತ್ಸಾಹ ಹಾಗೂ ಕುತೂಹಲ. ಇವುಗಳಿಂದ ನನ್ನ ಮನಸ್ಸು ಪುನಶ್ಚೇತನಗೊಳ್ಳುತ್ತದೆ. 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ಹಾಗೂ 'ಶ್ರೀರಾಮಕೃಷ್ಣ ವಚನವೇದ'ಗಳಲ್ಲಿ ಮಾತ್ರವಲ್ಲದೆ ಠಾಕೂರರು, ಶ್ರೀಮಾತೆ ಹಾಗೂ ಅವರ ಸಂನ್ಯಾಸಿ ಶಿಷ್ಯರುಗಳಿಗೆ ಸಂಬಂಧಿಸಿದ ಅನೇಕ ವಿಷಯಗಳು ಹಾಗೂ ಘಟನೆಗಳು ನಾನಾ ಸ್ಥಳಗಳಲ್ಲಿ ಹರಡಿಕೊಂಡಿವೆ. ಅವುಗಳಲ್ಲಿ ಕೆಲವೇ ಅಂಶಗಳನ್ನು ನನಗೆ ಸಂಗ್ರ

ಹಿಸಲು ಸಾಧ್ಯವಾಗಿದೆ. ಇವೆಲ್ಲ ನನ್ನ ಆತ್ಮಸ್ಮೃತಿಗಳಲ್ಲ- ಇವುಗಳು ಪ್ರವೀಣ ಸಾಧುಗಳ ಪುಣ್ಯಸ್ಮೃತಿಗಳು. ಇವರು ಠಾಕೂರರ ಪಾರ್ಷದರಿಂದ ಶಿಕ್ಷಣವನ್ನು ಪಡೆದ ಬಗೆಯನ್ನು ಮುಂದಿನ ಪೀಳಿಗೆಯವರು ತಿಳಿದುಕೊಳ್ಳುವುದು ಅತ್ಯಂತ ಆವಶ್ಯಕ. ಇಲ್ಲವಾದರೆ ನಮ್ಮ ಪರಂಪರೆಯನ್ನೇ ನಾವು ಕಳೆದುಕೊಳ್ಳುವೆವು.


### ಸ್ವಾಮಿ ಅಚಲಾನಂದರು

ಸ್ವಾಮಿ ಅಚಲಾನಂದರು ಸ್ವಾಮಿ ವಿವೇಕಾನಂದರ ಶಿಷ್ಯರು. ಅವರು ಜೀವನ ಸಂಧ್ಯೆಯನ್ನು ಕಾಶಿಯಲ್ಲಿ ಕಳೆದರು. ಅವರ ಪೂರ್ವಾಶ್ರಮದ ಹೆಸರು ಕೇದಾರನಾಥ ಮೌಲಿಕ್. ಸ್ವಾಮೀಜಿ ಅವರನ್ನು 'ಕೇದಾರಬಾಬಾ' ಎಂದು ಕರೆಯುತ್ತಿದ್ದುದರಿಂದ ಅವರು ಈ ಹೆಸರಿನಿಂದಲೇ ಪ್ರಸಿದ್ಧರು. ೧೯೩೮ರಲ್ಲಿ ಮಠ-ಮಿಷನ್ನಿನ ಉಪಾಧ್ಯಕ್ಷರಾದ ಅವರು ೧೯೪೭ರಲ್ಲಿ ಕಾಶಿಯಲ್ಲಿ ತಮ್ಮ ಕೊನೆಯುಸಿರನ್ನೆಳೆದರು. ಅವರು ಸ್ವಾಮಿ ನಿರಂಜನಾನಂದರ ಆತ್ಮೀಯ ಸಂಗವನ್ನು ಹೊಂದಿದ್ದರು.

ಅದ್ವೈತ ಆಶ್ರಮದ ಮ್ಯಾನೇಜರ್ ಆಗಿದ್ದ ಸ್ವಾಮಿ ವಾಮದೇವಾನಂದರು (ರಣೇನ್ ಮಹಾರಾಜ್) ಠಾಕೂರರ ಶಿಷ್ಯರ ಜೀವನವನ್ನು ಬರೆಯಲು ಮಾಹಿತಿ ಸಂಗ್ರಹಿಸಲು ಪ್ರಾರಂಭಿಸಿದಾಗ ಕಾಶಿಯ ಕೇದಾರಬಾಬಾ ಅವರಿಗೆ ಸ್ವಾಮಿ ನಿರಂಜನಾನಂದ ಹಾಗೂ ಸ್ವಾಮಿ ಅದ್ವೈತಾನಂದರಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ಕಳುಹಿಸಲು ಹೇಳಿದರು. ೧೮.೧೨.೧೯೪೬ರಿಂದ ಅದ್ವೈತ ಆಶ್ರಮದ ಪುರಾತತ್ತ್ವ ಸಂಗ್ರಹಾಲಯದಲ್ಲಿದ್ದ ಈ ಕೆಳಗಿನ ಮಾಹಿತಿಯನ್ನು ಅವರು ಕಳುಹಿಸಿದ್ದು, ಅದನ್ನು ನಾನು ನನ್ನ ಡೈರಿಯಲ್ಲಿ ಪ್ರತಿ ಮಾಡಿಕೊಂಡಿದ್ದೆ.

### ಸ್ವಾಮಿ ನಿರಂಜನಾನಂದರ ವಿಷಯ

ಶ್ರೀ ಠಾಕೂರರು ಪೂರ್ಣಬ್ರಹ್ಮ ನಾರಾಯಣರಾಗಿ ಅವತಾರವೆತ್ತಿದ್ದರೆಂದು ತಮ್ಮ ಮನ, ಪ್ರಾಣಗಳಿಂದ ನಂಬಿದ್ದ ಅವರು,



ಸ್ವಾಮಿ ಅಚಲಾನಂದ

ಠಾಕೂರರ ಭಾವವನ್ನು ಗ್ರಹಿಸಿದವರು ಯಾವ ಚಿಂತೆಯನ್ನೂ ಮಾಡಬೇಕಿಲ್ಲವೆಂದು ಹೇಳುತ್ತಿದ್ದರು.

ಶ್ರೀಮಾತೆಯವರ ವಿಷಯವಾಗಿಯೂ ಅವರಿಗೆ ಅತ್ಯಂತ ಉನ್ನತ ಭಾವನೆಯಿತ್ತು. ತಾಯಿಯ ಕೃಪೆಯಿಂದಲೇ ತಾವು ಎಲ್ಲವನ್ನೂ ಸಾಧಿಸಿದ್ದರೆಂಬುದು ಅವರ ವಿಶ್ವಾಸವಾಗಿತ್ತು.

ಶ್ರೀಠಾಕೂರರ ಬಗ್ಗೆ ಅವರು ಹೀಗೆ ಹೇಳುತ್ತಿದ್ದರು: ''ಯಾರೇ ಆಗಲಿ ಠಾಕೂರರ ಬಳಿ ಸಾರಿ 'ನಾನು ವಿವಾಹವಾಗುವುದಿಲ್ಲ' ಎಂದರೆ, ಠಾಕೂರರು ಅವನನ್ನೆತ್ತಿಕೊಂಡು ಕುಣಿದಾಡುತ್ತಿದ್ದರು.

''ಠಾಕೂರರನ್ನು ಜೀವಂತ, ಜಾಗೃತ, ಚೈತನ್ಯಮಯ ಹಾಗೂ ತನ್ನವರೆಂದೇ ಅಂತರಂಗದಲ್ಲಿ ಅರಿತು ಅವರ ಸೇವೆ ಮಾಡಿದರೆ, ಅದೇ ಅವರಿಗೆ ಸಲ್ಲಿಸುವ ಶ್ರೇಷ್ಠ ಪೂಜೆ. ಮಂತ್ರ ತಂತ್ರಗಳಿಗೆ ಅವರು ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಿರಲಿಲ್ಲ.''

ಸ್ವಾಮಿ ನಿರಂಜನಾನಂದರು ಅತ್ಯಂತ ತೇಜಸ್ವಿಗಳಾಗಿದ್ದರು. ಯಾರ ಹಿಡಿತಕ್ಕೂ ಅವರು ಸಿಲುಕದವರು. ಠಾಕೂರರನ್ನಲ್ಲದೆ ಮತ್ತಾರನ್ನೂ ಆಶ್ರಯಿಸುತ್ತಿರಲಿಲ್ಲ. ನಿರ್ಭಯತೆಯನ್ನು ಮೆಚ್ಚುತ್ತಿದ್ದರು.

ಸ್ವಾಮೀಜಿಯವರು ಪ್ರಾರಂಭಿಸಿದ ಸೇವಾಕಾರ್ಯಗಳ ಮೇಲೆ ಅತ್ಯಂತ ಶ್ರದ್ಧೆಯುಳ್ಳವರಾದ್ದರಿಂದ ಜನರನ್ನು ನಾರಾಯಣರೆಂಬ ಭಾವದಿಂದ ಸೇವೆಗೈಯಲು ಎಲ್ಲರನ್ನೂ ಪ್ರೋತ್ಸಾಹಿಸುತ್ತಿದ್ದರು.

ಸ್ವತಃ ಸತ್ಯನಿಷ್ಠರಾಗಿದ್ದ ಸ್ವಾಮಿ ನಿರಂಜನಾನಂದರು ಇತರರಲ್ಲೂ ಸತ್ಯಸಂಧತೆಯನ್ನು ಅಪೇಕ್ಷಿಸುತ್ತಿದ್ದರು. ಕೊಟ್ಟ ಮಾತನ್ನು ಉಳಿಸಿಕೊಳ್ಳದವರನ್ನು ಅವರು ಸ್ವಲ್ಪವೂ ಇಷ್ಟಪಡುತ್ತಿರಲಿಲ್ಲ. ಉದಾಹರಣೆಗಾಗಿ ಕೆಳಕಂಡ ಘಟನೆಯನ್ನು ಉಲ್ಲೇಖಿಸುತ್ತಿದ್ದೇನೆ: ಸೇವಾಶ್ರಮದ ಪ್ರಾರಂಭದಲ್ಲಿ ಅಲ್ಲಿ ನಡೆಯುತ್ತಿದ್ದ ಸೇವಾದಿ ಕಾರ್ಯಗಳಿಂದ ಸಂತೋಷಗೊಂಡ ಕಲ್ಕತ್ತದ ಶ್ರೀಮಂತರೊಬ್ಬರು ಸೇವಾಶ್ರಮದ ಜಮೀನು ಹಾಗೂ ಕಟ್ಟಡ ನಿರ್ಮಾಣಕ್ಕೆ ಬೇಕಾಗುವ ಖರ್ಚನ್ನು ತಾವು ವಹಿಸಿಕೊಳ್ಳುವುದಾಗಿ ಹೇಳಿದರು. ಆದರೆ ಕೆಲಸದ ದಿನಗಳಲ್ಲಿ ತಮ್ಮ ವಿಚಾರವನ್ನು ಬದಲಾಯಿಸಿ, 'ಪ್ರತಿ ತಿಂಗಳೂ ರೂ ೫೦೦/-ರಂತೆ ತೆಗೆದುಕೊಳ್ಳಿ, ಮುಂದೆ ನೋಡೋಣ', ಎಂದರು. ತಮ್ಮ ವಿಚಾರವನ್ನು ಬದಲಾಯಿಸಿದವರ ಮೇಲೆ ಅತ್ಯಂತ ಕ್ರುದ್ಧರಾದ ನಿರಂಜನಾನಂದರು ಅವರಿಂದ ಒಂದು ಪೈಸೆಯನ್ನೂ ಸ್ವೀಕರಿಸಲಿಲ್ಲ!

ನಿರಂಜನಾನಂದಜಿಯವರು ಬಹಳ ಉದಾರ ಸ್ವಭಾವದವರು. ಆಶ್ರಯ ಬೇಡಿ ಬಂದವರಿಗೆ ಎಲ್ಲಾ ರೀತಿಯ ಸಹಾಯವನ್ನೂ ನೀಡುತ್ತಿದ್ದರು.

ಯುವಕರನ್ನು ತ್ಯಾಗದ ಪಥದಲ್ಲಿ ಪ್ರೋತ್ಸಾಹಿಸುತ್ತಿದ್ದರೂ ಈ ಪಥವು ಅತ್ಯಂತ ಕಠಿಣವೆಂದು ಹೇಳುತ್ತ ಅವರನ್ನು ಎಚ್ಚರಿಕೆ

ಯಿಂದಿರುವಂತೆ ಸಲಹೆ ನೀಡುತ್ತಿದ್ದರು. ಒಮ್ಮೆ ಯುವಕನೊಬ್ಬನ ಗೃಹತ್ಯಾಗದ ಸಂಕಲ್ಪವನ್ನು ಕೇಳಿದ ಅವರು ಆ ಯುವಕನ ಸ್ನೇಹಿತನಿಗೆ ಹೀಗೆ ಬರೆದರು: ''ಸಾಧುವಾಗಬೇಕೆಂದಿರುವುದು ಉತ್ತಮ ವಿಚಾರವೇ. ಆದರೆ ಮಾರ್ಗವು ಅತ್ಯಂತ ದುರ್ಗಮ –'**ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ, ದುರ್ಗಂ ಪಥಸ್ತತ್ ಕವಯೋ ವದಂತಿ.**''

''ಸಂನ್ಯಾಸಿಗಳಿಗೆ ಮಧುಕರಿಯಿಂದ ದೊರೆತ ಅನ್ನವು ಪ್ರಶಸ್ತವಾದುದು,'' ಎನ್ನುತ್ತಿದ್ದರು. ಸ್ವತಃ ಅನೇಕ ವೇಳೆ ಮಧುಕರಿ ಭಿಕ್ಷೆಗೆ ಹೋಗಿ, ಮಧುಕರಿಯ ಅನ್ನವನ್ನು ಶ್ರೀಠಾಕೂರರಿಗೆ ನಿವೇದಿಸಿ ಪ್ರಸಾದವನ್ನು ಸ್ವೀಕರಿಸುತ್ತಿದ್ದರು.

ವ್ಯಾಯಾಮಕ್ಕೆ ಅವರು ಬಹಳ ಪ್ರಾಮುಖ್ಯತೆ ನೀಡುತ್ತಿದ್ದರು. ಶರೀರವು ಸುದೃಢ ಹಾಗೂ ಕರ್ಮಠವಾಗಿರುವಂತೆ ನೋಡಿಕೊಳ್ಳಬೇಕೆಂದು ಯುವಕರಿಗೆ ಉಪದೇಶಿಸುತ್ತಿದ್ದರು.

### ಸ್ವಾಮಿ ಅದ್ವೈತಾನಂದರ ವಿಷಯ

ಸ್ವಾಮಿ ಅದ್ವೈತಾನಂದರು ಶ್ರೀಠಾಕೂರರ ಉಪದೇಶ ಹಾಗೂ ನಿಷೇಧಾಜ್ಞೆಗಳನ್ನು ಅಕ್ಷರಶಃ ಪಾಲಿಸುತ್ತಿದ್ದು ಇತರರಿಗೂ ಅವುಗಳನ್ನು ಪಾಲಿಸಲು ಹೇಳುತ್ತಿದ್ದರು. ಇದರ ವಿರುದ್ಧವಾಗಿ ನಡೆದರೆ ಅತ್ಯಂತ ಕ್ಷುಬ್ಧಗೊಳ್ಳುತ್ತಿದ್ದರು.

ಶ್ರೀ ಠಾಕೂರರಂತೆಯೆ ಇವರಿಗೂ ಸಹ ಮಹತ್ತರ ವಿಷಯದಿಂದ ಹಿಡಿದು ಬಹಳ ಸಣ್ಣ ವಿಷಯದಲ್ಲೂ ತೀಕ್ಷ್ಣ ದೃಷ್ಟಿಯಿತ್ತು. ಬಾಗಿಲನ್ನು ಮುಚ್ಚುವಾಗ ಬಡಿದಂತೆ ಶಬ್ದಮಾಡುವುದು, ಹೊಸ ವಸ್ತ್ರವನ್ನು ಶಬ್ದಮಾಡುತ್ತ ಹರಿಯುವುದು, ಮುಂತಾದವುಗಳನ್ನು ನಿಷೇಧಿಸುತ್ತಿದ್ದರು.

ಶ್ರೀಠಾಕೂರರ ಸೇವೆಯನ್ನು ನಿಷ್ಠಾಪೂರ್ವಕವಾಗಿ ಅವರು ಮಾಡುತ್ತಿದ್ದರು. ಶುಚಿ-ಸ್ವಚ್ಛತೆ, ಸಾಮಾನುಗಳನ್ನು ತಂತಮ್ಮ ಜಾಗದಲ್ಲಿ ಓರಣಗೊಳಿಸುವುದು ಹಾಗೂ ಕೆಲಸಗಳನ್ನು ನಿರ್ದಿಷ್ಟ ಸಮಯದಲ್ಲೇ ಸರಿಯಾಗಿ ಮಾಡುವುದು ಅವರ ಸ್ವಭಾವವಾಗಿತ್ತು. ಹೀಗೆ ನಡೆಯಬೇಕೆಂದು ಅವರು ಇತರರಿಗೂ ಉಪದೇಶಿಸುತ್ತಿದ್ದರು.

ನಿತ್ಯ ನಿಯಮಿತವಾಗಿ ವ್ಯಾಯಾಮವನ್ನು ಮಾಡಬೇಕೆಂದು ಅವರು ಹೇಳುತ್ತಿದ್ದರು.

ಆಲಸಿಗಳಾಗಿರುವುದನ್ನು ಅವರು ಸಹಿಸುತ್ತಿರಲಿಲ್ಲ. ಅವರು ಸದಾ ಕಾರ್ಯತತ್ಪರರಾಗಿರುತ್ತಿದ್ದರು.

ಮಠದ ತೋಟಗಾರಿಕೆ ಹಾಗೂ ಇತರ ಕಾರ್ಯಗಳನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದ್ದು, ಇತರರಿಗೂ ಅವರು ಹೀಗೆ ಮಾಡಲು ಹೇಳುತ್ತಿದ್ದರು. ✽

**ಸುದ್ದಿ ಸಂಚಯ**

## ಡಾ. ಎಚ್.ಎನ್.ಮುರಳೀಧರ ಅವರಿಗೆ ಸೋದರಿ ನಿವೇದಿತಾ ಪ್ರಶಸ್ತಿ

ರಾಮಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್, ಗೋಲ್‌ಪಾರ್ಕ್, ಕೊಲ್ಕತ್ತ ಈ ಸಂಸ್ಥೆಯು ನೀಡುವ ಪ್ರತಿಷ್ಠಿತ '**ಸೋದರಿ ನಿವೇದಿತಾ**' ಪ್ರಶಸ್ತಿಯನ್ನು ೨೦೨೨ನೇ ಸಾಲಿನಲ್ಲಿ ಡಾ. ಎಚ್.ಎನ್.ಮುರಳೀಧರ ಅವರಿಗೆ ಡಿಸೆಂಬರ್ ೧೦ರಂದು ನೀಡಲಾಗಿದೆ.



ಬೆಂಗಳೂರು ರಾಮಕೃಷ್ಣ ಮಠದ ಭಕ್ತರಾಗಿರುವ ಡಾ. ಮುರಳೀಧರ ಅವರು ಅನೇಕ ವರ್ಷಗಳಿಂದ ರಾಮಕೃಷ್ಣ-ವಿವೇಕಾನಂದ ಸಾಹಿತ್ಯಕ್ಕೆ ವಿಶೇಷ ರೀತಿಯ ಸೇವೆ ಸಲ್ಲಿಸಿದ್ದಾರೆ. ವಿಶೇಷ ಉಲ್ಲೇಖ ಮಾಡಬಹುದಾದ ಕೃತಿಯೆಂದರೆ, ಸ್ವಾಮಿ ವಿವೇಕಾನಂದರ ಕವಿತೆಗಳ ಅನುವಾದ ಸಂಕಲನ, '**ಹಾಡು ಚಾಗಿಯ ಹಾಡನು.**' ಇದಲ್ಲದೆ, ಇನ್ನೂ ಅನೇಕ ಗ್ರಂಥಗಳನ್ನೂ, ವಿಮರ್ಶಾ ಲೇಖನಗಳನ್ನೂ, ಅಂಕಣ ಬರಹಗಳನ್ನೂ ಬರೆದಿರುವ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ನಿಯತವಾಗಿ ಅನೇಕ ಲೇಖನಗಳನ್ನು ಬರೆದಿದ್ದಾರೆ. ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಅವರು ಉತ್ತಮ ಚಿಂತಕರೂ ವಿಮರ್ಶಕರೂ ಆಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ 'ಸ್ವಾಮಿ ವಿವೇಕಾನಂದ ಪೀಠ'ದಲ್ಲಿ ಒಂದು ವರ್ಷ ಅವಧಿಗೆ ಅತಿಥಿ ಪ್ರಾಧ್ಯಾಪಕರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶ್ರೀಯುತರಿಗೆ ಸಲ್ಲಿಸಲಾದ ಫಲಕದಲ್ಲಿ, ''ಸ್ವಾಮಿ ವಿವೇಕಾನಂದರು ಬಂಗಾಳಿ, ಸಂಸ್ಕೃತ ಹಾಗೂ ಇಂಗ್ಲಿಷ್‌ನಲ್ಲಿ ರಚಿಸಿದ ಕವಿತೆಗಳನ್ನು ಕಾವ್ಯಾತ್ಮಕವಾಗಿ ಅನುವಾದಿಸಿದ ಕಾರ್ಯಕ್ಕಾಗಿ ಶ್ರೀ ಮುರಳೀಧರ ಅವರಿಗೆ ಈ ವರ್ಷದ ಸೋದರಿ ನಿವೇದಿತಾ ಪ್ರಶಸ್ತಿಯನ್ನು ನೀಡಲಾಗುತ್ತಿದೆ.. ದಿವ್ಯತ್ರಯರ ಸಂದೇಶವನ್ನು ಕನ್ನಡ ಜನತೆಗೆ ಹರಡುವಲ್ಲಿ ಅವರು ಸಲ್ಲಿಸುತ್ತಿರುವ ಸೇವೆಗಾಗಿ ಈ ಸಂಸ್ಥೆಯು ಈ ಪ್ರಶಸ್ತಿಯನ್ನು ಪ್ರದಾನ ಮಾಡುತ್ತಿದೆ'' ಎಂದು ದಾಖಲಿಸಿದೆ. ಈ ಪ್ರಶಸ್ತಿಯನ್ನು ಪಡೆದ ಶ್ರೀಯುತರಿಗೆ 'ವಿವೇಕಪ್ರಭ' ಪತ್ರಿಕೆಯು ಅಭಿನಂದನೆಗಳನ್ನು ಸಲ್ಲಿಸುತ್ತದೆ.